
# ಒಂದು ಐತಿಹಾಸಿಕ ಪತ್ರ

ಬಂಗಾಳಿ ಮೂಲ : **ಶಂಕರೀಪ್ರಸಾದ ಬಸು**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**



ಶ್ರೀ ಗುರವೇ ನಮಃ

ಜಯರಾಮಬಾಟಿ
೧೩೦೯, ಭಾದ್ರಪದ ೧೫

ಮಂಗಳವನ್ನು ಕೋರುತ್ತ ,
ಪರಮ ಶುಭಾಶೀರ್ವಾದಗಳೊಂದಿಗೆ —

ಮಗೂ, ನೀನು ಬರೆದ ಒಂದು ಪತ್ರ ತಲುಪಿದೆ ಹಾಗೂ ಅದರ ವಿಷಯವನ್ನು ತಿಳಿದೆ. ಶ್ರೀ ಸ್ವಾಮೀಜಿ ಮಹಾರಾಜರಿಗೆ ಎಂತಹ ಕಷ್ಟ ವುಂಟಾಯಿತು ಎಂಬುದನ್ನು ಬರೆದು ತಿಳಿಸಿರುವೆ. ನಮ್ಮ ಗುರು ಯಾರೋ, ಅವರು ಅದ್ವೈತಿಯಾಗಿದ್ದರು. ನೀವೆಲ್ಲರೂ ಅದೇ ಗುರುವಿನ ಶಿಷ್ಯಂದಿರು, ಹೀಗಾಗಿ ನೀವೂ ಅದ್ವೈತವಾದಿಗಳೇ. ನಾನು ದೃಢವಾಗಿ ಹೇಳಬಲ್ಲೆ – ನೀವೆಲ್ಲರೂ ನಿಜವಾಗಿಯೂ ಅದ್ವೈತಿಗಳೇ – ಎಂದು. ಮಿಸೆಸ್ ಸೇವಿಯರ್‌ಗೆ ನನ್ನ ಪ್ರೀತಿ ಹಾಗೂ ಆಶೀರ್ವಾದವನ್ನು ತಿಳಿಸು. ನಿಮಗೆಲ್ಲರಿಗೂ ನನ್ನ ಆಶೀರ್ವಾದಗಳು. ಕಾಳೀಕೃಷ್ಣ ಅಲ್ಲಿಗೆ ಹೋಗುತ್ತಾನೆ ಎಂದು ಮತಿಲಾಲನ ಒಂದು ಪತ್ರದಿಂದ ತಿಳಿಯಿತು. ಅವನಿಗೆ ನನ್ನ ಆಶೀರ್ವಾದವನ್ನು ತಿಳಿಸು. ಹೆಣ್ಣುಮಕ್ಕಳಿರುವ ಮಠ – ಅಲ್ಲಿ ಜಾಗ್ರತೆಯಿಂದಿರು. ನಾವೆಲ್ಲರೂ ಚೆನ್ನಾಗಿದ್ದೇವೆ. ನಿಮ್ಮ ವರ್ತಮಾನ ಬರೆದು ತಿಳಿಸು.

ಇತಿ,
ನಿಮ್ಮೆಲ್ಲರ ತಾಯಿ,
ಆಶೀರ್ವಾದಗಳು

ಶ್ರೀಮಾತೆ ಶಾರದಾದೇವಿಯವರ ಪತ್ರದ ಛಾಯಾಪ್ರತಿಯನ್ನು ಅದರ ಅನುವಾದದೊಂದಿಗೆ ಮೇಲೆ ನೀಡಲಾಗಿದೆ; ಅದು ನನ್ನ ಪ್ರಕಾರ ಒಂದು ಐತಿಹಾಸಿಕ ಪತ್ರವಾಗಿದೆ. ರಾಮಕೃಷ್ಣ ಭಾವಧಾರೆಯ ಇತಿಹಾಸದಲ್ಲೇ ಅದಕ್ಕೊಂದು ಸ್ಥಾನವಿದೆ. ಈ ಭಾವಧಾರೆಗೆ ಭಾರತ ಹಾಗೂ ಪ್ರಪಂಚದ ಧಾರ್ಮಿಕ ಆಂದೋಲನಗಳಲ್ಲಿ ಯಾವ ಉಲ್ಲೇಖಯೋಗ್ಯವಾದ ಸ್ಥಾನವಿದೆಯೋ, ಅದೇ ರೀತಿ ಈ ಭಾವಧಾರೆಯ ಇತಿಹಾಸದಲ್ಲಿ ಕೂಡ ಯಾವುದಾದರೂ ರಚನೆಗೆ ವಿಶೇಷ ಮಹತ್ವವಿದ್ದರೆ, ಅದರ ಐತಿಹಾಸಿಕ ಮಹತ್ವವನ್ನು ಕೂಡ ಸ್ವೀಕರಿಸಬೇಕಾಗುತ್ತದೆ.

ಪತ್ರವನ್ನು ಬರೆದವರು ಬರಹಗಾರ್ತಿ ಎಂಬ ದೃಷ್ಟಿಯಿಂದ ಪ್ರಸಿದ್ಧರೇನೂ ಅಲ್ಲ. ಅವರೂ ಕೂಡ ತಮ್ಮ ಕೈಯಿಂದ ಈ ಪತ್ರವನ್ನು ಬರೆಯಲಿಲ್ಲ. ನಿಜವಾಗಿ ಹೇಳಬೇಕೆಂದಿದ್ದರೆ, ಅವರಿಗೆ ಬರೆಯಲೂ ಬರುತ್ತಿರಲಿಲ್ಲ. ಈ ಕ್ಷೇತ್ರದಲ್ಲಿ ಅವರು ತಮ್ಮ ಸುಪ್ರಸಿದ್ಧರಾದ 'ನಿರಕ್ಷರ' ಪತಿಯನ್ನೂ ಮೀರಿಸಿದ್ದರು.[೧] 'ನಿರಕ್ಷರ'ರಾದ ಶ್ರೀರಾಮಕೃಷ್ಣರು ಬರೆಯಲು ಕಲಿತಿದ್ದರು; ಅವರ ಅಕ್ಷರವೂ ಸುಂದರವಾಗಿತ್ತು.

೧ ಸ್ವಾಮಿ ಗಂಭೀರಾನಂದರ 'ಶ್ರೀಮಾ ಶಾರದಾದೇವಿ' ಗ್ರಂಥದಲ್ಲಿ ಶ್ರೀಮಾತೆಯವರ ಓದು, ಬರಹದ ಬಗ್ಗೆ ಕೆಲವು ಮಾಹಿತಿಗಳು ಲಭಿಸುತ್ತವೆ. ತಮ್ಮ ವಿವಾಹದ ನಂತರ ತಮ್ಮ ಓದು ಬರಹದ ಬಗ್ಗೆ ಶ್ರೀಮಾತೆ ಹೇಳಿದ್ದರು: ''ಚಿಕ್ಕಂದಿನಲ್ಲಿ ಪ್ರಸನ್ನ, ರಾಮನಾಥ (ಸೋದರ ಸಂಬಂಧಿ) ಇವರೆಲ್ಲ ಶಾಲೆಗೆ ಹೋಗುತ್ತಿದ್ದರು. ಅವರೊಂದಿಗೆ ಒಮ್ಮೊಮ್ಮೆ ನಾನೂ ಹೋಗುತ್ತಿದ್ದೆ. ಅಲ್ಲೇ ಸ್ವಲ್ಪ ಕಲಿತಿದ್ದೆ.'' ವಿವಾಹದ ನಂತರ ತಮ್ಮ ಓದುಬರಹದ ಬಗ್ಗೆ ಹೀಗೆ ಹೇಳಿದ್ದರು: ''ಕಾಮಾರಪುಕುರದಲ್ಲಿ ಲಕ್ಷ್ಮೀ ಮತ್ತು ನಾನು 'ವರ್ಣಪರಿಚಯ' ಪಾಠಪುಸ್ತಕವನ್ನು ಸ್ವಲ್ಪಸ್ವಲ್ಪ ಓದುತ್ತಿದ್ದೆವು. ಅಳಿಯ (ಹೃದಯ) ಪುಸ್ತಕ ಕಸಿದುಕೊಂಡ; ಅನಂತರ ಹೇಳಿದ, 'ಹೆಣ್ಣುಮಕ್ಕಳು ವಿದ್ಯಾಭ್ಯಾಸ ಮಾಡಬಾರದು. ಕೊನೆಗೆ ನಾಟಕ, ಕಾದಂಬರಿ ಓದುವುದಕ್ಕೋ?' ಆದರೆ ಲಕ್ಷ್ಮೀ ಅವಳ ಪುಸ್ತಕವನ್ನು ಕೊಡಲಿಲ್ಲ. ಅವಿವಾಹಿತ ಹುಡುಗಿ

ಪತ್ರದ ಛಾಯಾಪ್ರತಿಯಲ್ಲಿ ಓದುಗರಿಗೆ ಕಂಡುಬರುವುದೇನೆಂದರೆ, ಅದರಲ್ಲಿ ಬೇಕಾದಷ್ಟು ಅಕ್ಷರ ತಪ್ಪುಗಳಿವೆ; ಭಾಷಾ ರಚನೆ ಕೂಡ ಉತ್ತಮವಾಗಿಲ್ಲ. ಪತ್ರದ ಆಶಯವನ್ನು ಶ್ರೀಮಾತೆಯವರು ಹೇಳಿ ಹೋಗಿದ್ದರು; ಅವರ ಸೇವಕ ಅಥವಾ ಒಡನಾಡಿ ಮಹಿಳೆಯರು ಯಾರೋ ಅದನ್ನು ಬರೆದುಬಿಟ್ಟಿದ್ದಿರಬೇಕು. ಈ ದೃಷ್ಟಿಯಿಂದ ನೋಡಿದಾಗಲೂ, ಇದರಲ್ಲಿ ಚಿಂತನಾಯೋಗ್ಯ ವಿಷಯ ಇದೆಯೆಂದೇ ಹೇಳಬೇಕು.

ಈ ಪತ್ರವು ಇಲ್ಲಿಯವರೆಗೆ ಎಲ್ಲೂ ಪ್ರಕಟಿತವಾದಂತೆ ನನಗೆ ತಿಳಿದುಬಂದಿಲ್ಲ; ಆದರೆ ಇದರಲ್ಲಿರುವ ಮಹತ್ವದ ಅಂಶವು ಬಹಳ ಮೊದಲೇ ಪ್ರಚಾರವಾಗಿದೆ. ೧೯೧೫ರಲ್ಲಿ ಪ್ರಕಟವಾದ, 'ಪ್ರಾಚ್ಯ ಹಾಗೂ ಪಾಶ್ಚಾತ್ಯ ಶಿಷ್ಯಂದಿರಿಂದ' ಬರೆಯಲ್ಪಟ್ಟ ಸ್ವಾಮಿ ವಿವೇಕಾನಂದ ಆಂಗ್ಲ ಜೀವನಚರಿತ್ರೆಯ ಮೂರನೇ ಭಾಗದಲ್ಲಿ ಮೊದಲ ಬಾರಿಗೆ ಈ ಪತ್ರದ ಉಲ್ಲೇಖವಿದೆ. ಬಳಿಕ ಸ್ವಾಮಿ ಶ್ರದ್ಧಾನಂದರ 'ಅತೀತೇರ್ ಸ್ಮತಿ' (ಇಂಗ್ಲಿಷಿನಲ್ಲಿ 'The Story of an Epoch') ಗ್ರಂಥದಲ್ಲಿ ಸ್ವಾಮಿ ಸ್ವರೂಪಾನಂದರ ಡೈರಿಯಿಂದ ಈ ಪತ್ರದ ಕೆಲವು ಸಾಲುಗಳನ್ನು ಉಲ್ಲೇಖಿಸಲಾಗಿದೆ. ಸ್ವಾಮಿ ಗಂಭೀರಾನಂದರು ಬರೆದ 'ಶ್ರೀ ಮಾ ಶಾರದಾದೇವಿ' ಗ್ರಂಥದಲ್ಲಿ ಸ್ವಾಮೀಜಿಯವರ ಮೇಲೆ ಹೇಳಿದ ಗ್ರಂಥದಿಂದ ಉಲ್ಲೇಖಿಸಲಾಗಿದೆ; ಅಂತೆಯೇ ಅವರು ತಮ್ಮ 'ಯುಗನಾಯಕ ವಿವೇಕಾನಂದ' ಗ್ರಂಥದಲ್ಲಿ 'ಅತೀತೇರ್ ಸ್ಮೃತಿ' ಗ್ರಂಥದಿಂದ ಉಲ್ಲೇಖಿಸಿದ್ದಾರೆ. ಸ್ವಾಮಿ ಸ್ವರೂಪಾನಂದರ ಡೈರಿಯನ್ನು ಸ್ವಾಮಿ ಅಬ್ಜಜಾನಂದರ ಬಳಿ ನೋಡುವ ಸುಯೋಗ ನನಗೆ ಲಭಿಸಿತ್ತು. ಅಲ್ಲಿ ಹೇಳಿರುವ ಅಂಶವನ್ನು 'ನಿವೇದಿತಾ ಲೋಕಮಾತಾ' ಗ್ರಂಥದಲ್ಲಿ ಉದ್ಧರಿಸಲಾಗಿದೆ. ಸ್ವಾಮಿ ವಿವೇಕಾನಂದರ ಶಿಷ್ಯರಾದ ಖಗೇನ್ ಅಥವಾ ಸ್ವಾಮಿ ವಿಮಲಾನಂದರು ಶ್ರೀಮಾತೆಯವರಿಗೆ ಒಂದು ಪತ್ರವನ್ನು ಬರೆದಿದ್ದರು. ಅದಕ್ಕೆ ಉತ್ತರವಾಗಿ ಶ್ರೀಮಾತೆ ಈ ಪತ್ರವನ್ನು ಬರೆದಿದ್ದರು. ೧೯೦೨ರ ಸೆಪ್ಟೆಂಬರ್ ೭ರಂದು ಸ್ವಾಮಿ ಸ್ವರೂಪಾನಂದರು ತಮ್ಮ ಡೈರಿಯಲ್ಲಿ ಈ ವಿಷಯವಾಗಿ ಬರೆದಿದ್ದಾರೆ: ''ಖಗೇನ್ ಶ್ರೀಮಾತೆಯವರ ಪತ್ರವನ್ನು ಪಡೆದ, ಜಯರಾಮಬಾಟಿಯಿಂದ ೧೯೦೨ರ ಆಗಸ್ಟ್ ೩೧ರಂದು ಅದನ್ನು ಪಡೆದನು. ಅದರಲ್ಲಿ ಬರೆದಿದ್ದರು–'' ಶ್ರೀಮಾತೆಯವರ ಪತ್ರದ ಛಾಯಾಚಿತ್ರವನ್ನು ಹಿಂದಿನ ಪುಟದಲ್ಲಿ ಮುದ್ರಿಸಲಾಗಿದೆ.

---

ಯಲ್ಲವೆ? ಹಟಮಾಡಿ ಇಟ್ಟುಕೊಂಡಳು. ನಾನೂ ಗುಟ್ಟಾಗಿ ಒಂದೊಂದೇ ಆಣೆ ಸೇರಿಸಿ, ಪುಸ್ತಕ ಕೊಂಡುಕೊಂಡೆ. ಲಕ್ಷ್ಮೀ ಶಾಲೆಗೆ ಹೋಗಿ ಕಲಿತು ಬರುತ್ತಿದ್ದಳು; ಶಾಲೆಯಿಂದ ಬಂದ ಮೇಲೆ ನನಗೆ ಕಲಿಸುತ್ತಿದ್ದಳು.''

ಶ್ರೀಮಾತೆಯವರ ಮಾತಿನಿಂದ ಇನ್ನೂ ಕೆಲವು ಮಾಹಿತಿಗಳು ಲಭಿಸುತ್ತವೆ. ಅವರು ದಕ್ಷಿಣೇಶ್ವರದಲ್ಲಿ ಇದ್ದಾಗ ಇನ್ನೂ ಚೆನ್ನಾಗಿ ಕಲಿತರು, ಭವ ಮುಖರ್ಜಿಯವರ ಕಡೆಯ ಹೆಣ್ಣುಮಗಳು ಒಬ್ಬಳು ಸ್ನಾನ ಮಾಡಲು ಬಂದಾಗ ಅವರಿಗೆ ಕಲಿಸುತ್ತಿದ್ದಳು. ಶ್ರೀಮಾತೆಯವರು ಅವಳಿಗೆ ಸಂಬಳ (ಅಥವಾ ಗುರುದಕ್ಷಿಣೆಯೆಂಬಂತೆ) ಎಂಬಂತೆ ತೋಟದ ತರಕಾರಿ, ಸೊಪ್ಪು ಕೊಡುತ್ತಿದ್ದರು. ಹೀಗೆ ಕಲಿತದ್ದರ ಪರಿಣಾಮವಾಗಿ ಅವರು ರಾಮಾಯಣವೇ ಮೊದಲಾದ ಪುಸ್ತಕಗಳನ್ನು ಓದಲು ಸಾಧ್ಯವಾಗಿತ್ತು. ಆದರೆ ಬರೆಯಲು ಹೆಚ್ಚು ಸಾಧ್ಯವಾಗುತ್ತಿರಲಿಲ್ಲ, ಇಳಿವಯಸ್ಸಿನಲ್ಲಿ ಅವರಿಗೆ ಸಹಿ ಮಾಡಲೂ ಸಾಧ್ಯವಾಗುತ್ತಿರಲಿಲ್ಲ.

ಪತ್ರದ ವಿಷಯವೇನೆಂಬುದು ಸ್ವಾಮೀಜಿಯವರ ಜೀವನ ಚರಿತ್ರೆಯನ್ನು ಓದಿದವರಿಗೆ ತಿಳಿದಿರುತ್ತದೆ. ೧೯೦೦ರ ಡಿಸೆಂಬರ್ ತಿಂಗಳ ಕೊನೆಯ ಭಾಗದಲ್ಲಿ ಸುರಿದ ಜಡಿಮಳೆ ಹಾಗೂ ಹಿಮಪಾತದ ನಡುವೆ, ತೀವ್ರ ಅನಾರೋಗ್ಯವಿದ್ದರೂ ಸ್ವಾಮೀಜಿ ದುರ್ಗಮವಾಗಿದ್ದ ಮಾಯಾವತಿಗೆ ಹೋಗಿದ್ದರು. ಶೋಕದಿಂದ ಪೀಡಿತರಾಗಿದ್ದ ಮಿಸೆಸ್ ಸೇವಿಯರ್ ಅವರಿಗೆ ಸಾಂತ್ವನ ನೀಡಲು ಹಾಗೂ ತಮ್ಮ ಕನಸು ಸಾಕಾರಗೊಂಡಿದ್ದನ್ನು ತಮ್ಮ ಕಣ್ಣುಗಳಿಂದಲೇ ನೋಡುವುದಕ್ಕಾಗಿ ಅವರು ಅಲ್ಲಿಗೆ ಹೋಗಿದ್ದರು. ಸ್ವಾಮೀಜಿಯವರ ಕನಸಿನಂತೆ ಮಾಯಾವತಿಯಲ್ಲಿ ಕ್ಯಾಪ್ಟನ್ ಸೇವಿಯರ್ ಅವರು ಅದ್ವೈತ ಆಶ್ರಮವನ್ನು ಸ್ಥಾಪಿಸಿದ್ದರು; ಅದೇ ಕ್ಯಾಪ್ಟನ್ ಸೇವಿಯರ್ ಚಿಕಿತ್ಸೆಯಿಲ್ಲದ್ದರಿಂದ ದೇಹತ್ಯಾಗ ಮಾಡಿದ್ದರು. ಈ ಮರಣವು ಸ್ವಾಮೀಜಿಯವರ 'ವಿಷನ್' ಗೋಸ್ಕರ ಮಾಡಿದ ಆತ್ಮಾರ್ಪಣೆಯಲ್ಲದೆ ಬೇರೇನೂ ಅಲ್ಲ.

ಸ್ವಾಮೀಜಿಯವರ ಹಲವು ಬಗೆಯ 'ವಿಷನ್'ಗಳಲ್ಲಿ ಪ್ರಮುಖವಾದ ಒಂದು – ಅದ್ವೈತವನ್ನು ಶುದ್ಧರೂಪದಲ್ಲಿ ಸಾಧನೆಯ ಮಾರ್ಗವಾಗಿ ಗ್ರಹಣ ಮಾಡುವುದು, ಹಾಗೂ ಅದನ್ನು ಧರ್ಮರೂಪದಲ್ಲಿ ಪ್ರಚಾರ ಮಾಡುವ ವ್ರತವನ್ನು ಸ್ವೀಕರಿಸುವುದು. ಇದನ್ನು ಕ್ಯಾಪ್ಟನ್ ಹಾಗೂ ಮಿಸೆಸ್ ಸೇವಿಯರ್ ಮಾಡಿದರು, ಇದಕ್ಕಾಗಿಯೇ ಅವರು ಅದ್ವೈತ ಆಶ್ರಮವನ್ನು ಸ್ಥಾಪಿಸಿದರು. ಸ್ವಾಮೀಜಿ ಈ ಕ್ಷೇತ್ರದಲ್ಲಿ ಯಾವ ವಿರಾಟ್ ಹಾಗೂ ವಿಶುದ್ಧ ಕಲ್ಪನೆಯನ್ನು ಸಾಕಾರಗೊಳಿಸಿದರು – ಇದನ್ನು ಸ್ವಾಮೀಜಿ ಜೀವನ ಚರಿತ್ರೆಯನ್ನು ಓದಿದವರು ಬಲ್ಲರು. ಕ್ಯಾಪ್ಟನ್ ಹಾಗೂ ಮಿಸೆಸ್ ಸೇವಿಯರ್ – ಈ ಇಬ್ಬರು ವಿದೇಶೀಯರ ಹಾಗೂ ಸ್ವಾಮಿ ಸ್ವರೂಪಾನಂದರೆಂಬ ಸ್ವದೇಶೀಯರ ಸಹಾಯವನ್ನು ಪಡೆದು ಸ್ವಾಮೀಜಿ ಎಷ್ಟೊಂದು ಉಲ್ಲಾಸಗೊಂಡಿದ್ದರು ಎಂಬುದನ್ನೂ ಓದುಗರು ಬಲ್ಲರು. ಕ್ಯಾಪ್ಟನ್ ಸೇವಿಯರ್ ತಮ್ಮ ಯಾವ ಅಸ್ಥಿಪಂಜರದಿಂದ ಮಾಯಾವತಿಯ ವಜ್ರೋಪಮ ಅದ್ವೈತ ಆಶ್ರಮವನ್ನು ನಿರ್ಮಿಸಿದರೋ, ಅದನ್ನು ನೋಡುವುದಕ್ಕಾಗಿಯೇ ಸ್ವಾಮೀಜಿ ತಮ್ಮ ಕೊನೆಯ ಹಿಮಾಲಯ ಯಾತ್ರೆಯನ್ನು ಮಾಡಿದರು.

ಮಾಯಾವತಿಯು ಸ್ವಾಮೀಜಿಯವರಿಗೆ ಎಷ್ಟೊಂದು ಆನಂದವನ್ನು ತಂದುಕೊಟ್ಟಿತು ಎಂಬುದನ್ನು ಅವರ ಜೀವನ ಚರಿತ್ರೆಯಲ್ಲಿ ಕಾಣಬಹುದು. ಒಂದು ವಿಷಯವು ಅವರಿಗೆ ದೊಡ್ಡ ಆಘಾತವನ್ನು ಕೂಡ ಉಂಟುಮಾಡಿತು – ಅದನ್ನೂ ನಾವು ನೋಡಬಹುದು. ಅದ್ವೈತ ಆಶ್ರಮದ ಒಂದು ಕೋಣೆಯಲ್ಲಿ ಸ್ವಾಮೀಜಿಯವರ ಒಬ್ಬರು ಶಿಷ್ಯರು ಶ್ರೀರಾಮಕೃಷ್ಣರ ಚಿತ್ರಪಟವನ್ನು ಇಟ್ಟು, ಅದಕ್ಕೆ ಪೂಜೆ ಮಾಡಲು ಆರಂಭಿಸಿಬಿಟ್ಟಿದ್ದರು. ರಾಮಕೃಷ್ಣ ಮಹಾಸಂಘದ ಒಂದಾದರೂ ಕೇಂದ್ರದಲ್ಲಿ ಶುದ್ಧ ನಿರಾಕಾರ ಭಾವದಲ್ಲಿ ಅದ್ವೈತ ಉಪಾಸನೆ ನಡೆಯುವ ಕನಸನ್ನು ಸ್ವಾಮೀಜಿ ಕಂಡಿದ್ದರು. ದೂರದ ಹಿಮಾಲಯದಲ್ಲಿರುವ ಮಾಯಾವತಿ ಅದ್ವೈತ ಆಶ್ರಮವೇ ಸ್ವಾಮೀಜಿಯವರು ಆತ್ಯಂತಿಕವಾಗಿ

ಬಯಸಿದ್ದ ಆ ಕೇಂದ್ರವಾಗಿತ್ತು. ಅಲ್ಲೂ ಈಗ ಸಾಕಾರ ಉಪಾಸನೆ! ಇದಕ್ಕೂ ಮಿಗಿಲಾಗಿ, 'ಹೇಳಿದಂತೆ ಮಾಡಿಲ್ಲ' ಎಂಬ ಭಾವನೆಯನ್ನೇ ಈ ಘಟನೆಯು ಅವರಲ್ಲಿ ಮೂಡಿಸಿತು ಎಂದು ನನ್ನ ಅನಿಸಿಕೆ. ಕ್ಯಾಪ್ಟನ್ ಹಾಗೂ ಮಿಸೆಸ್ ಸೇವಿಯರ್ ಶುದ್ಧ ಅದ್ವೈತವಾದಿಗಳು, ಅವರೇ ಅದ್ವೈತ ಆಶ್ರಮವನ್ನು ಸ್ಥಾಪಿಸಿದವರು. ಅಲ್ಲಿನ ಪ್ರಮುಖ ನಿವಾಸಿ ಸ್ವಾಮಿ ಸ್ವರೂಪಾನಂದರೂ ಅದೇ ರೀತಿ ಅದ್ವೈತಿಗಳು. ಯಾವ ಕಾರಣದಿಂದ ಈ ತತ್ತ್ವವು ರಾಮಕೃಷ್ಣ ಮಹಾಸಂಘದ ಅಂತಃಸತ್ತ್ವವಾಗಿದೆಯೋ, ಅದನ್ನು ಈ ಸಂಘದ ಸಾಧು-ಬ್ರಹ್ಮಚಾರಿಗಳು ಅನುಸರಿಸುವ ಬದಲು ಶ್ರೀರಾಮಕೃಷ್ಣರ ಪೂಜೆಯನ್ನು ಆರಂಭಿಸಿಬಿಟ್ಟರೆ, ಅದರಿಂದ ಆದರ್ಶದ ರಕ್ಷಣೆಯೂ ಸಾಧ್ಯವಾಗದು, ನಾಯಕನ ಆದರ್ಶದ ಪರಿಪಾಲನೆಯೂ ಸಾಧ್ಯವಾಗದು.

೧೯೧೨ರಲ್ಲಿ ಪ್ರಕಟವಾದ ಸ್ವಾಮಿ ವಿವೇಕಾನಂದರ ಇಂಗ್ಲಿಷ್ ಜೀವನ ಚರಿತ್ರೆಯ ಮೂರನೇ ಭಾಗದಿಂದ ಆಯ್ದ ಭಾಗಗಳ ಅನುವಾದವನ್ನಿಲ್ಲಿ ನೀಡುತ್ತೇನೆ:

''ಆಶ್ರಮವಾಸಿಗಳೊಬ್ಬರ ಕಳಕಳಿಯ ವಿನಂತಿಯ ಮೇರೆಗೆ ಆಶ್ರಮದಲ್ಲಿ ಶ್ರೀರಾಮಕೃಷ್ಣರ ಭಾವಚಿತ್ರವನ್ನೊಳಗೊಂಡ ಒಂದು ದೇವರ ಕೋಣೆಯನ್ನು ಕೆಲವು ಸಮಯದಿಂದ ಸ್ಥಾಪಿಸಲಾಗಿತ್ತು. ಸ್ವಾಮೀಜಿ ಇಲ್ಲಿಗೆ ಬಂದಾಗ, ಒಂದು ದಿನ ಬೆಳಿಗ್ಗೆ ಈ ಕೋಣೆಯನ್ನು ನೋಡಿದರು. ಅಲ್ಲಿ ಶ್ರೀರಾಮಕೃಷ್ಣರ ಪೂಜೆ ಸಾಧಾರಣದಂತೆ ಪುಷ್ಪ ಧೂಪಾದಿಗಳೊಂದಿಗೆ ನಡೆಯುತ್ತಿತ್ತು. ಆಗ ಸ್ವಾಮೀಜಿ ಏನನ್ನೂ ಹೇಳಲಿಲ್ಲ , ಆದರೆ ಅಂದು ಸಂಜೆ ಎಲ್ಲರೂ ಧುನಿ ಹಾಕುವ ಕೋಣೆಯಲ್ಲಿ ಸೇರಿದಾಗ, ಅವರು ಅದ್ವೈತ ಆಶ್ರಮದಲ್ಲಿ ಶ್ರೀರಾಮಕೃಷ್ಣರ ಪೂಜೆ ನಡೆಯುತ್ತಿರುವ ಬಗ್ಗೆ ಖಂಡತುಂಡವಾಗಿ ವಿರೋಧಿಸಿದರು. 'ಈ ರೀತಿ ಮಾಡಬಾರದಾಗಿತ್ತು. ವೈಯಕ್ತಿಕ ಧಾರ್ಮಿಕ ಆಚರಣೆಗೆ ಮಾತ್ರವೇ ಇಲ್ಲಿ ಗಮನ ಕೊಡಬೇಕು – ಹೇಗೆ ಎಂದರೆ, ಏಕಾಂತ ಧ್ಯಾನ, ವೈಯಕ್ತಿಕ ಹಾಗೂ ಸಾಮೂಹಿಕ ಶಾಸ್ತ್ರಾಧ್ಯಯನ, ಅತ್ಯುನ್ನತ ಅದ್ವೈತ ತತ್ತ್ವದ ಅನುಷ್ಠಾನ ಹಾಗೂ ಬೋಧನೆ, ದ್ವೈತಭಾವದ ಯಾವುದೇ ದೌರ್ಬಲ್ಯ-ಅವಲಂಬನೆಗಳಿಲ್ಲದ ಸಾಧನೆ – ಇವು ನಡೆಯಬೇಕು. ಈ ಆಶ್ರಮದಿಂದ ಹೊರಡಿಸಲಾದ ಕಾರ್ಯಕ್ರಮ ಪಟ್ಟಿಗೆ ಅನುಗುಣವಾಗಿ, ಇಲ್ಲಿ ಏಕತಾತತ್ತ್ವವನ್ನು ಸರಳವಾಗಿ ಹಾಗೂ ಶುದ್ಧವಾಗಿ, ಯಾವುದೇ ಅಂಧಶ್ರದ್ಧೆ ಅಥವಾ ದೌರ್ಬಲ್ಯವನ್ನು ಹತ್ತಿಸುವ ಸಾಂಕ್ರಾಮಿಕಗಳಿಂದ ಮುಕ್ತವಾಗಿಸಿ ಅಭ್ಯಸಿಸಬೇಕು, ಹಾಗೂ ಅನುಷ್ಠಾನಗೊಳಿಸಬೇಕು' ಎಂದು ಸ್ವಾಮೀಜಿ ನಿರ್ದೇಶಿಸಿದರು. ಈ ಆಶ್ರಮವು ಅದ್ವೈತ ಸಾಧನೆಗಾಗಿ ಮಾತ್ರವೇ ಮೀಸಲಾಗಿದೆ. ಈ ಕಾರಣದಿಂದ ಸ್ವಾಮೀಜಿಗೆ ಪೂಜೆಯನ್ನು ಕುರಿತು ಟೀಕಿಸುವ ಅಧಿಕಾರವಿತ್ತು. ಅದೂ ಅಲ್ಲದೆ, ತಮ್ಮ ಗುರುವಿನ ತರಬೇತಿಯಿಂದ ಹಾಗೂ ಆಶೀರ್ವಾದದಿಂದಾಗಿಯೇ ಅವರು ಅದ್ವೈತಿಯಾಗಿದ್ದರು; ಶ್ರೀರಾಮಕೃಷ್ಣರು ಎಲ್ಲ ಧರ್ಮಗಳ ಆದರ್ಶವನ್ನು ಬೋಧಿಸಲು ನಿಯಮಿಸಿದ್ದರೂ ಕೂಡ, ತಮ್ಮ ಅದ್ವೈತವಾದಿಯಾಗುವುದನ್ನು ಅವರು ಬಯಸಿದ್ದರೆಂಬುದು ಸ್ವಾಮೀಜಿಯವರಿಗೆ ಚೆನ್ನಾಗಿ ಗೊತ್ತಿತ್ತು. ಅಲ್ಲಿ ಬಾಹ್ಯಪೂಜೆಯ ವಿರುದ್ಧವಾಗಿ ತಮ್ಮ ಭಾವನೆ ಎಷ್ಟು ಶಕ್ತವಾಗಿದೆ ಎಂಬುದನ್ನು ಅವರು ಉಳಿದವರಿಗೆ ತಿಳಿಸಿದ್ದರೂ, ದೇವರ ಕೋಣೆಯನ್ನು ಒಂದೇ ಬಾರಿಗೆ ನೆಲಸಮ ಮಾಡಲು ಅವರು ಆಜ್ಞಾಪಿಸಲಿಲ್ಲ. ಅದನ್ನು ಸ್ಥಾಪನೆ ಮಾಡಿದವರ ಭಾವನೆಗಳನ್ನು ನಷ್ಟಗೊಳಿಸಿ, ಆಘಾತವುಂಟಾಗುವಂತೆ ಇದ್ದಕ್ಕಿದ್ದಂತೆ ಅವರು ಏನನ್ನೂ ಮಾಡುತ್ತಿರಲಿಲ್ಲ. ಹಾಗೆ ಮಾಡಿದ್ದರೆ ಅವರು ತಮ್ಮ ಅಧಿಕಾರದ ದುರ್ಬಳಕೆ ಮಾಡಿದಂತಾಗುತ್ತಿತ್ತು. ಅದಕ್ಕೆ ಬದಲಾಗಿ, ಅವರೆಲ್ಲ ತಮ್ಮ ತಪ್ಪನ್ನು ಅರಿತುಕೊಳ್ಳಬೇಕು, ಬೆಳೆಯಬೇಕು. ಆದರೆ ಈ ವಿಷಯದಲ್ಲಿ ಸ್ವಾಮೀಜಿಯವರ ಸ್ವಲ್ಪವೂ ರಾಜಿ ಮಾಡಿಕೊಳ್ಳದ ಸ್ವಭಾವಕ್ಕೆ ಬದ್ಧರಾಗಿದ್ದ ಹಾಗೂ ಅದ್ವೈತ ಆಶ್ರಮದ ಧ್ಯೇಯ-ಆದರ್ಶಗಳಿಗೆ ಬದ್ಧರಾಗಿದ್ದ ಶಿಷ್ಯಂದಿರಿಬ್ಬರು – ಸ್ವಾಮಿ ಸ್ವರೂಪಾನಂದರು ಹಾಗೂ ಮಿಸೆಸ್ ಸೇವಿಯರ್ – ಆ ಕೂಡಲೇ ಬಾಹ್ಯಪೂಜೆ ಮಾಡುವುದನ್ನು ಬಿಟ್ಟುಬಿಟ್ಟರು; ಕ್ರಮೇಣ ದೇವರಕೋಣೆಯನ್ನು ಕೂಡ ಅಲ್ಲಿಂದ ತೆಗೆದುಬಿಟ್ಟರು. ಕೊನೆಯದಾಗಿ, ದ್ವೈತಭಾವನೆಯತ್ತ ಒಲವಿದ್ದೂ ತಾನು ಅದ್ವೈತ ಆಶ್ರಮದ ಸದಸ್ಯನಾಗಿರುವುದು ಸರಿಯೇ ಎಂಬ ಸಂದೇಹ ಹೊಂದಿದ್ದವರೊಬ್ಬರು[೨], ಶ್ರೀಮಾತೆಯವರಿಗೆ ತಮ್ಮ ಸಂದೇಹವನ್ನು ತೋಡಿಕೊಂಡರು. ಅವರಿಂದ ಸಮಾಧಾನಕರವಾದ ಉತ್ತರ ಲಭಿಸಿತು: 'ಶ್ರೀಗುರುದೇವರು ಸಂಪೂರ್ಣ ಅದ್ವೈತಿಯಾಗಿದ್ದರು; ಅದ್ವೈತವನ್ನೇ ಬೋಧಿಸಿದರು. ಆದಕಾರಣ, ನೀನು ಕೂಡ ಏಕೆ ಅದ್ವೈತವನ್ನು ಅನುಸರಿಸಬಾರದು? ಅವರ ಶಿಷ್ಯಂದಿರೆಲ್ಲರೂ ಅದ್ವೈತಿಗಳೇ ಆಗಿದ್ದಾರೆ!' ಸ್ವಾಮೀಜಿ ಬೇಲೂರು ಮಠಕ್ಕೆ ಮರಳಿದಾಗ, ಅವರು ಹತಾಶೆಯ ಭಾವದಿಂದ ಮೇಲಿನ ವಿಷಯದ ಬಗ್ಗೆ ಹೇಳಿದರು, ''ಕಡೆಯ ಪಕ್ಷ ಒಂದು ಕೇಂದ್ರದಲ್ಲಾದರೂ ಶ್ರೀರಾಮಕೃಷ್ಣರ ಬಾಹ್ಯಪೂಜೆ ಇಲ್ಲದಿರಲಿ ಎಂದು ನಾನು ಭಾವಿಸಿದ್ದೆ. ಆದರೆ ಅಲ್ಲಿಗೆ ಹೋದಾಗ, ಆ ಮುದುಕ ಅಲ್ಲೂ ತನ್ನನ್ನು ಸ್ಥಾಪಿಸಿಕೊಂಡಿದ್ದುದನ್ನು ಕಂಡೆ. ಆಗಲಿ, ಒಳ್ಳೆಯದು.''

ಸ್ವಾಮಿ ವಿವೇಕಾನಂದರ ಇಂಗ್ಲಿಷ್ ಜೀವನ ಚರಿತ್ರೆಯಲ್ಲಿ ಪ್ರಕಟವಾದ ಈ ವಿವರಣೆಯ ಮಹತ್ವವೇನೆಂದರೆ, ಈ ಜೀವನ ಚರಿತ್ರೆಯನ್ನು ಸ್ವಾಮಿ ವಿರಜಾನಂದರ ಹಾಗೂ ಮಿಸೆಸ್ ಸೇವಿ

---

೨ ಇಲ್ಲೊಂದು ಪ್ರಶ್ನೆ ಏಳಬಹುದು – ದೇವರಕೋಣೆಯ ವಿಷಯವಾಗಿ ಸ್ವಾಮೀಜಿಯವರಿಗೆ ಯಾರಾದರೂ ಸುದ್ದಿ ಕೊಟ್ಟಿರಬಹುದೆ? 'ಅತೀತೇರ್ ಸ್ಮೃತಿ' ಗ್ರಂಥದ ಪ್ರಕಾರ, ಇಲ್ಲ– ಅದು ಸತ್ಯವಲ್ಲ. ಒಂದು ದಿನ ಸ್ವಾಮೀಜಿಯವರೇ ಅದನ್ನು ಕಂಡುಹಿಡಿದರು. ಅದರ ನಂತರ ಸ್ವಾಮೀಜಿ ಮದರ್ ಸೇವಿಯರ್ ಹಾಗೂ ಸ್ವಾಮಿ ಸ್ವರೂಪಾನಂದರಿಗೆ ಅದ್ವೈತ ಆಶ್ರಮದ ನೀತಿನಿಯಮಗಳಿಗೆ ವಿರುದ್ಧವಾಗಿ ಪೂಜೆ ನಡೆಯಲು ಬಿಟ್ಟಿದ್ದಕ್ಕಾಗಿ 'ಅತ್ಯಂತ ಅಸಮಾಧಾನ'ವನ್ನು ವ್ಯಕ್ತಪಡಿಸಿದರು.

ಯರ್ ಅವರ ನೇರ ಆದೇಶದಂತೆಯೇ ಬರೆಯಲಾಗಿತ್ತು – ಎಂಬುದು. ಅದ್ವೈತ ಆಶ್ರಮದಲ್ಲಿ ಮೇಲೆ ಹೇಳಿದ ಘಟನೆಯು ನಡೆದಾಗ ಅವರಿಬ್ಬರೂ ಅಲ್ಲೇ ಇದ್ದರು, ತಾವು ನೇರವಾಗಿ ಕಂಡದ್ದನ್ನೇ ಅಲ್ಲಿ ಬರೆಸಿದ್ದರು. ಇನ್ನೊಂದು ವಿಷಯವನ್ನೂ ಇಲ್ಲಿ ಉಲ್ಲೇಖಿಸಬೇಕು – ಅವರಿಬ್ಬರೂ ಎರಡು ತತ್ತ್ವಗಳ ಕ್ಷೇತ್ರದಲ್ಲಿ 'ವಿರೋಧಿ ಬಣ'ಗಳಿಗೆ ಸೇರಿದವರಾಗಿದ್ದರು. ಸ್ವಾಮಿ ವಿರಜಾನಂದರು ದೇವರಕೋಣೆಯನ್ನು ಸ್ಥಾಪಿಸಬೇಕೆಂಬ ಬಣದವರು[೩], ಹಾಗೂ ಮಿಸೆಸ್ ಸೇವಿಯರ್ ಕಟ್ಟಾ ಅದ್ವೈತವಾದಿಗಳು.

ಇಂಗ್ಲಿಷ್ ಜೀವನ ಚರಿತ್ರೆಯಲ್ಲಿ ಶ್ರೀಮಾತೆಯವರ ಪತ್ರದ ಭಾಗವನ್ನು ನೀಡಿರುವಲ್ಲಿ ಕೂಡ, ಅಕ್ಷರಶಃ ಅನುವಾದ ಬಂದಿಲ್ಲ; ಹಾಗೂ ಒಬ್ಬರು ಆಶ್ರಮದ ನಿವಾಸಿಗಳು (ಸ್ವಾಮಿ ವಿಮಲಾನಂದರು) ಯಾವ ವಿಷಯದ ಬಗ್ಗೆ ವಿಚಾರಿಸಿ ಶ್ರೀಮಾತೆಯವರಿಗೆ ಪತ್ರ ಬರೆದಿದ್ದಾರೆ ಎಂಬುದೂ ಸ್ಪಷ್ಟವಾಗಿ ತಿಳಿಸಿಲ್ಲ. ಸ್ವಾಮಿ ವಿಮಲಾನಂದರು, ತಮಗೆ ಕೇವಲ ದ್ವೈತವಾದದ ಕಡೆಗೆ ಒಲವು ಇತ್ತು ಹಾಗೂ ಇದರಿಂದ ಅದ್ವೈತ ಆಶ್ರಮದಲ್ಲಿ ತಾವು ವಾಸಿಸುವುದು ಸರಿಯೇ – ಈ ವಿಷಯವನ್ನು ಕುರಿತು ಪ್ರಶ್ನೆ ಹಾಕಿ ಶ್ರೀಮಾತೆಯವರಿಗೆ ಪತ್ರ ಬರೆದಿದ್ದರೆ? ಅಥವಾ, ಅದ್ವೈತ ಆಶ್ರಮದಲ್ಲಿ ದೇವರಕೋಣೆ ಸ್ಥಾಪಿಸಿದ್ದಕ್ಕೆ ವಿರುದ್ಧವಾಗಿ ತಮ್ಮ ಗುರುಗಳ ಮನೋಭಾವ ಹೇಗಿತ್ತೆಂಬ ವಿಷಯವಾಗಿಯೂ ಪ್ರಶ್ನೆ ಹಾಕಿ ಪತ್ರ ಬರೆದಿದ್ದರೆ? ಎರಡನೇ ಪ್ರಶ್ನೆ ಕೂಡ ಅಲ್ಲಿತ್ತು ಎಂದೇ ಅನ್ನಿಸುವುದು. ಇದಲ್ಲದೆ ಯಾರು ತಮ್ಮ ಸರ್ವಸ್ವವನ್ನೂ ಧರ್ಮಕ್ಕಾಗಿ ಸಮರ್ಪಿಸಿರುವರೋ, ಅವರು ಎಷ್ಟೊಂದು ಆಳವಾಗಿ ವಿಷಯಗಳನ್ನು ಚರ್ಚಿಸಬಲ್ಲರು, ಹಾಗೂ ಸ್ವಾಮೀಜಿಯವರಂಥ ಗುರುಗಳ ಕಾರ್ಯದಲ್ಲೂ ತಾರ್ಕಿಕತೆಯ ವಿಷಯವಾಗಿ ಸಂದೇಹ ಪಡಬಲ್ಲರು– ಇದು ನಮಗೆ ಅರ್ಥವಾಗುವುದು. ಇದರೊಂದಿಗೆ, ರಾಮಕೃಷ್ಣ ಮಹಾಸಂಘದಲ್ಲಿ ಶ್ರೀಮಾತೆ ಶಾರದಾದೇವಿಯವರು ಕೇವಲ ಗುರುಪತ್ನಿಯಷ್ಟೇ ಆಗಿರಲಿಲ್ಲ ; ಅವರು ಗುರುವಿನ ಪ್ರತಿನಿಧಿ ಕೂಡ ಆಗಿದ್ದರು, ಸಂಘಜನನಿ ಹಾಗೂ ಧರ್ಮದ ವಿಷಯದಲ್ಲಿ ಅವರೇ ಸರ್ವೋಚ್ಚ ಅಧಿಕಾರಿಣಿಯೂ ಆಗಿದ್ದರು – ಇದು ಕೂಡ ನಮಗೆ ತಿಳಿದುಬರುವುದು.[೪]

ಈಗ ಚರ್ಚಿಸಿರುವ ಶ್ರೀಮಾತೆ ಶಾರದಾದೇವಿಯವರ ಪತ್ರದ ಮಹತ್ವದ ಬಗ್ಗೆ ಇಲ್ಲಿಯವರೆಗೂ ಸ್ವಾಮೀಜಿಯವರ ದೃಷ್ಟಿಕೋನದಿಂದಲೇ ವಿವೇಚನೆ ನಡೆಸಿದ್ದೇವೆ. ಆದರೆ ಶ್ರೀಮಾತೆಯವರ ಜೀವನದ ದೃಷ್ಟಿಯಿಂದ ನೋಡುವಾಗ ಅದು ಕಡಿಮೆ ಮಹತ್ವದ್ದೆ? ಒಂದು ಸಲ ನಾವು ಚಿಂತಿಸಿ ನೋಡಿದಾಗ ಹೀಗೆ ಅನ್ನಿಸುವುದು: ಶ್ರೀಮಾತೆಯವರು ತಮ್ಮ ಸಹಜವಾದ ಸನ್ನಿವೇಶದಿಂದ ತಮ್ಮನ್ನು ಪ್ರತ್ಯೇಕಿಸಿ, ನಿತ್ಯಸತ್ಯದ ನೆಲೆಯಲ್ಲಿ ತಮ್ಮನ್ನು ನೆಲೆಗೊಳಿಸಲು ಅವರಿಗೆ ಸಾಧ್ಯವಾಗಿತ್ತೆ? – ಹಾಗಿದ್ದಲ್ಲಿ ನಾವು ಒಂದೇ ಬಾರಿಗೆ ಸ್ತಂಭೀಭೂತರಾಗುವೆವು. ಕಾರಣ, ಶ್ರೀಮಾತೆಯವರು ಸ್ತ್ರೀ ಹಾಗೂ ತಾಯಿ ಎರಡೂ ಆಗಿದ್ದರು. ದೈನಂದಿನ ಬದುಕಿನಲ್ಲಿ ಅವರು ಸ್ವತಃ ತಾವೇ ದ್ವೈತವಾದಿಯಾಗಿದ್ದರು. ಅವರು ಪೂಜಿಸುವ ದೇವತೆ ಕೂಡ ತಮ್ಮ ಪತಿಯೇ ಆಗಿದ್ದರು – ಅವರು ಗುರು ಹಾಗೂ ಈಶ್ವರ ಎರಡೂ – ಆಗಿದ್ದರು. ದಿನವಿಡೀ ಅವರ ಪೂಜೆಯಲ್ಲೇ ಶ್ರೀಮಾತೆ ಕಳೆಯುತ್ತಿದ್ದರು. ತಮ್ಮ ಗುರುವಿನ ಶಿಷ್ಯನ ಇಚ್ಛೆಯಂತೆ ಅದೇ ಪತಿ–ಗುರು–ಈಶ್ವರನ ಪೂಜೆಯ ಚಿತ್ರಪಟವನ್ನು ತೆಗೆದುಬಿಡಲಾಗಿದೆ. ಹೀಗಿರುವಾಗ ಈ ವಿಷಯದಲ್ಲಿ ಅವರ ಮನೋಭಾವ, ಸಿದ್ಧಾಂತ ಏನಾಗಿತ್ತು? – ಅದ್ವೈತ ಆಶ್ರಮದಲ್ಲಿ ಶ್ರೀರಾಮಕೃಷ್ಣರ ಪೂಜೆಯನ್ನು ನಿಲ್ಲಿಸಿ ಸ್ವಾಮೀಜಿ ಸರಿಯಾದುದನ್ನೇ ಮಾಡಿದರೆಂದು!! ನಮ್ಮ ಲೌಕಿಕ ದೃಷ್ಟಿಯಿಂದ ಈ ವಿಷಯವು ಅಸಾಧಾರಣವೇ. ಆದರೆ ಶ್ರೀರಾಮಕೃಷ್ಣರ ಸಹಧರ್ಮಿಣಿಯ ದೃಷ್ಟಿಯಿಂದ ಹೀಗೆ ಮಾಡುವುದು ಸಾಧ್ಯವಿತ್ತು; ಶ್ರೀರಾಮಕೃಷ್ಣರು ತಮ್ಮ ಅದ್ವೈತ ಸಾಧನೆಯ ಸಮಯದಲ್ಲಿ ಜ್ಞಾನಖಡ್ಗದಿಂದ ಜಗನ್ಮಾತೆಯ ಮೂರ್ತಿಯನ್ನೇ ಸೀಳಿ ಹಾಕಿದರಲ್ಲವೆ! ಶ್ರೀಮಾತೆ ಶಾರದಾದೇವಿಯರ ಬಗ್ಗೆ ಶ್ರೀರಾಮಕೃಷ್ಣರು, ''ಆಕೆ ಶಾರದೆ, ಸರಸ್ವತಿ'' ಎಂದಿದ್ದರು. ಈ ಮಾತಿಗೆ ಬೇರೆ ಪ್ರಮಾಣ ಬೇಕೆ?

ಈ ಪತ್ರಕ್ಕೆ ಇನ್ನೂ ಒಂದು ಮಹತ್ವವಿದೆ. ಶ್ರೀರಾಮಕೃಷ್ಣರ ಹಾಗೂ ರಾಮಕೃಷ್ಣ ಮಹಾಸಂಘದ ಅತ್ಯುನ್ನತ ಧಾರ್ಮಿಕ ಭಾವನೆಯೇನು – ಈ ಬಗ್ಗೆ ಪ್ರಶ್ನೆಯೆದ್ದಾಗ, ಈ ಪತ್ರ ಹಾಗೂ ಅದರ ವಿಶ್ಲೇಷಣೆ ಮಾಡಬೇಕಾಗುತ್ತದೆ. ಶ್ರೀರಾಮಕೃಷ್ಣರು ಸಮನ್ವಯಾಚಾರ್ಯರಾಗಿದ್ದರು, ನಿಜ. ಆದರೆ, ಸ್ವತಃ ತಾವೇ ಅದ್ವೈತವಾದಿಯೂ ಆಗಿದ್ದರು. ಅವರ ಧರ್ಮ, ತತ್ತ್ವದ ಬಗ್ಗೆ ಸಾಕಷ್ಟು ತರ್ಕ, ಜಿಜ್ಞಾಸೆ ನಡೆದಿದೆ. ಅವರು ದ್ವೈತವಾದಿಯೇ, ವಿಶಿಷ್ಟಾದ್ವೈತವಾದಿಯೇ, ಅಥವಾ ಅದ್ವೈತವಾದಿಯೇ ಎಂದು. 'ವಚನವೇದ'ವನ್ನು ಓದಿ ಅನೇಕರು ಅವರನ್ನು ವಿಶಿಷ್ಟಾದ್ವೈತವಾದಿಯೆಂದೇ ಭಾವಿಸುವರು. ಒಬ್ಬರು ಪಂಡಿತರೂ ಅಧ್ಯಾಪಕರೂ ಆದ ಲೇಖಕರೊಬ್ಬರು ಒಂದು ಪುಸ್ತಕವನ್ನು ಬರೆದು, ಅದ್ವೈತವಾದಿಯಾಗಿದ್ದ ಸ್ವಾಮಿ ವಿವೇಕಾನಂದರು ಬಲವಂತ

---

೩ 'ಸ್ವಾಮಿ ವಿರಜಾನಂದರು ಈ ದೇವರಕೋಣೆಯ ಒಬ್ಬ ಪ್ರಧಾನ ಅರ್ಚಕರಾಗಿದ್ದರು.' – *'ಅತೀತೇರ್ ಸ್ಮೃತಿ'*

೪ ನೇರವಾಗಿ ಹೇಳುವುದಿದ್ದರೆ, ಅವರು ರಾಮಕೃಷ್ಣ ಮಹಾಸಂಘದ 'ಹೈಕೋರ್ಟ್' ಆಗಿದ್ದರು. ಸ್ವಾಮಿ ಶಿವಾನಂದರು ಈ ಪದವನ್ನು ಬಳಸಿದ್ದರು. ಸ್ವಾಮಿ ಗಂಭೀರಾನಂದರ 'ಶ್ರೀಮಾ ಶಾರದಾದೇವಿ' ಗ್ರಂಥದಲ್ಲಿ ಹೀಗಿದೆ: ಒಂದು ಸಲ ಒಬ್ಬ ಬ್ರಹ್ಮಚಾರಿ ಏನೋ ಒಂದು ತಪ್ಪು ಮಾಡಿದ, ಸ್ವಾಮಿ ಶಿವಾನಂದರು ಅವನನ್ನು ಬೇಲೂರು ಮಠದಿಂದ ಕಳುಹಿಸಿಬಿಟ್ಟರು. ಅವನು ಭಯಗೊಂಡು ಒಂದೇ ಸಮನೆ ಕಾಲುನಡಿಗೆಯಲ್ಲಿ ಜಯರಾಮಬಾಟಿಗೆ ಹೋಗಿ, ಶ್ರೀಮಾತೆಯವರ ಭೇಟಿ ಮಾಡಿದ. ಶ್ರೀಮಾತೆಯವರು ಅವನನ್ನು ಕ್ಷಮಿಸಿ, ಅದನ್ನು ತಿಳಿಸಿ ಸ್ವಾಮಿ ಶಿವಾನಂದರಿಗೆ ಪತ್ರ ಬರೆದರು, ಬಳಿಕ ಅವರು ಆ ಬ್ರಹ್ಮಚಾರಿಯನ್ನು ಬೇಲೂರು ಮಠಕ್ಕೆ ಕಳುಹಿಸಿಕೊಟ್ಟರು. ಅವನು ಮರಳಿ ಬಂದಾಗ ಶಿವಾನಂದಜಿ ಅವನನ್ನು ತಬ್ಬಿಕೊಂಡು ಹೇಳಿದರು, 'ಮಗೂ, ನೀನು ನನ್ನ ಹೆಸರಿನಲ್ಲಿ ಹೈಕೋರ್ಟ್‌ನಲ್ಲಿ ಕೇಸ್ ಹಾಕಲು ಹೋಗಿಬಿಟ್ಟೆಯಾ?'

ವಾಗಿ ಶ್ರೀರಾಮಕೃಷ್ಣರನ್ನು ಅದ್ವೈತಿಯನ್ನಾಗಿಸಲು ಪ್ರಯತ್ನಿಸಿದ್ದಾರೆ, ಆದರೆ ನಿಜವಾಗಿಯೂ ಅವರು ಅದ್ವೈತಿಯಾಗಿರಲಿಲ್ಲ–ಎಂದು ಪ್ರಮಾಣೀಕರಿಸಲು ಯತ್ನಿಸಿದ್ದಾರೆ. ಈ ಬಗೆಯ ಕೃತಿಗಳು ಖಂಡಿತವಾಗಿಯೂ ಕೊನೆಯ ಮಾತೇನಲ್ಲ. ಈ ವಿಷಯದಲ್ಲಿ ಖಚಿತವಾದ ಸಿದ್ಧಾಂತವನ್ನು ನಿರ್ಣಯಿಸಲು ಅತ್ಯಂತ ನಿಖರವಾದ ಪ್ರಮಾಣಗಳ ಅಗತ್ಯವಿದೆ – ಶ್ರೀಮಾತೆ ಶಾರದಾ ದೇವಿಯವರ ಪತ್ರವು ಅಂತಹ ಒಂದು ಖಚಿತವಾದ ಪ್ರಮಾಣವಾಗಿದೆ.

ಕೊನೆಯದಾಗಿ ವಿನಯಪೂರ್ವಕವಾಗಿ ಒಂದು ವಿಷಯವನ್ನು ನೆನಪಿಸಬಯಸುತ್ತೇನೆ– ಶ್ರೀರಾಮಕೃಷ್ಣರು ಸಮನ್ವಯಾಚಾರ್ಯರಾಗಿದ್ದುಕೊಂಡೂ ಅದ್ವೈತವಾದಿಯಾಗಿದ್ದರು; ಇದರಲ್ಲೇನೂ ವಿರೋಧವಿಲ್ಲ. ಬದಲಾಗಿ, ಅವರು ಅದ್ವೈತವಾದಿಯಾಗಿರದಿದ್ದರೆ ಸಮನ್ವಯಾಚಾರ್ಯರಾಗುತ್ತಿದ್ದರೆ? ಸಮನ್ವಯವಾದಿಯ ಮಾತಿದು – ಯಾವ ಮಾರ್ಗವನ್ನು ಹಿಡಿದು ಸಾಗಿದರೂ ಸರಿ, ನಿಜವಾದ ವ್ಯಾಕುಲತೆಯಿದ್ದರೆ, ಸಾಧಕನು ಪರಮಲಕ್ಷ್ಯವನ್ನು ತಲುಪುತ್ತಾನೆ. ಈ ಮಾತನ್ನು ಅದ್ವೈತವಾದಿ ಮಾತ್ರವೇ ಹೇಳಬಲ್ಲ. ಏಕೆಂದರೆ, ಅವನ ಮಾರ್ಗದಲ್ಲಿ ಸಾಕಾರ ರೂಪಿ ಭಗವಂತನನ್ನು – ಈಶ್ವರನ ಯಾವುದೇ ರೂಪವನ್ನು ಅವನು ಅಂತಿಮವೆಂದು ಭಾವಿಸುವುದಿಲ್ಲ. ಯಾರ ಬಳಿ ಯಾವುದೇ ಒಂದು ಮೂರ್ತಿಯೂ ಇಲ್ಲದೆ, ಅದ್ವಯ ತತ್ತ್ವವನ್ನು ಎಲ್ಲ ಬಗೆಯ ದೈವೀರೂಪಗಳ ಮೂಲವೆಂದು ಪ್ರತ್ಯಕ್ಷವಾಗಿ ಸಾಕ್ಷಾತ್ಕರಿಸಿಕೊಂಡಿರುವವನೋ, ಅವನು ಯಾವುದೋ ಒಂದು ಮಾರ್ಗವನ್ನು ಮಾತ್ರ ಅವಲಂಬಿಸಬೇಕೆಂದು ಹೇಳಲಾರ. ಬದಲಾಗಿ, ದ್ವೈತವಾದಿಗಳು ತಮ್ಮ ಸಾಂಪ್ರದಾಯಿಕ ಸಾಕಾರ ಭಗವಂತನೇ ಸತ್ಯವೆಂದು ಹೇಳುತ್ತಾರೆ; ಆದ ಕಾರಣ ಭಗವಂತನನ್ನು ಸೇರಲು ಈ ಸಾಂಪ್ರದಾಯಿಕ ಮಾರ್ಗವೊಂದೇ ಅವಲಂಬನೀಯ ಎಂದು ಹೇಳುತ್ತಾರೆ – ಅವರ ಪಾಲಿಗೆ ಇದು ಸ್ವಾಭಾವಿಕ. ದ್ವೈತವಾದಿಗಳು ತುಂಬ ಉದಾರಿಗಳಾದರೆ, ಹೆಚ್ಚೆಂದರೆ ಅನ್ಯ ಮತಾವಲಂಬಿಗಳನ್ನು 'ಸಹಿಸಿ'ಕೊಳ್ಳುವರು, ಆದರೆ 'ಸ್ವೀಕರಿಸು'ವರೆ?

ಶ್ರೀರಾಮಕೃಷ್ಣರು ಹೇಳಿದ್ದರು: ಬ್ರಹ್ಮನು ಅಗ್ನಿಯಾದರೆ, ಶಕ್ತಿ ಅವನ ಸುಡುವ ಗುಣ. ಆದರೆ ಆ ಸುಡುವ ಗುಣ ಅಗ್ನಿಯದು; ಅಗ್ನಿ ಸುಡುವ ಗುಣದ್ದಲ್ಲ. ಶ್ರೀರಾಮಕೃಷ್ಣರೆಂಬ ಬ್ರಹ್ಮನ ಶಕ್ತಿಯೇ ಶಾರದೆ; ಆದ್ದರಿಂದಲೇ ಅವರು ದೃಢವಾಗಿ ಮೂಲ ಸತ್ಯಸ್ವರೂಪವನ್ನು ಪ್ರಕಟಪಡಿಸಿದರು: ''ನಮ್ಮ ಗುರು ಯಾರೋ, ಅವರು ಅದ್ವೈತಿಯಾಗಿದ್ದರು.'' ❁


## ಶ್ರೀರಾಮಕೃಷ್ಣ ಶಾರದಾಶ್ರಮ

**ಪೊನ್ನಂಪೇಟೆ – 571216, ಕೊಡಗು ಜಿಲ್ಲೆ,** ಫೋನ್,ವಾಟ್ಸಾಪ್ **: 7795119774, 7204498633**

Email: ponnampet@rkmm.org Web: https://ponnampet.rkmm.org

## ಆಧ್ಯಾತ್ಮಿಕ ಶಿಬಿರ

**14.10.2024 ರಿಂದ 17.10.2024**

ಪೊನ್ನಂಪೇಟೆಯಲ್ಲಿ ನಿರ್ಮಾಣವಾಗಿರುವ ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಮಂದಿರದ 15ನೇ ವಾರ್ಷಿಕೋತ್ಸವದ ಪ್ರಯುಕ್ತ, 2024ರ ಅಕ್ಟೋಬರ್ 14 ರಿಂದ 17ರ ವರೆಗೆ, ಆಶ್ರಮದಲ್ಲಿ 4 ದಿನಗಳ '**ಆಧ್ಯಾತ್ಮಿಕ ಶಿಬಿರ**'ವನ್ನು ಆಯೋಜಿಸಲಾಗಿದೆ. ರಾಮಕೃಷ್ಣ ಮಠದ ಹಿರಿಯ ಯತಿಗಳಾದ ಪೂಜ್ಯ ಸ್ವಾಮಿ ಮುಕ್ತಿದಾನಂದಜಿ, ಬೋಧಸ್ವರೂಪಾನಂದಜಿ, ವೀರೇಶಾನಂದಜಿ, ಯುಕ್ತೇಶಾನಂದಜಿ, ತದ್ಯುಕ್ತಾನಂದಜಿ, ಮಹಾಮೇಧಾನಂದಜಿ, ಶಾಂತಿವ್ರತಾನಂದಜಿ ಮತ್ತಿತರರು ಶಿಬಿರದಲ್ಲಿ ಭಕ್ತರಿಗೆ ಮಾರ್ಗದರ್ಶನ ನೀಡಲಿದ್ದಾರೆ. ಶಿಬಿರದಲ್ಲಿ ಇತರ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಆಯೋಜಿಸಲಾಗಿದೆ.

**ನೋಂದಣಿ ಶುಲ್ಕ : ವಸತಿ ರಹಿತ : ರೂ. 800/– ವಸತಿ ಸಹಿತ : ರೂ. 1800/–**

**ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 10–10–2024**

(ಹೆಸರು, ವಯಸ್ಸು, ವಿಳಾಸ ಮತ್ತು ದೂರವಾಣಿಯನ್ನು ಪತ್ರ, ವಾಟ್ಸಾಪ್ ಅಥವಾ ಇ–ಮೇಲ್ ಮೂಲಕ ತಿಳಿಸಿ)

ವಿ.ಸೂ: **ಎಲ್ಲ ಕಾರ್ಯಕ್ರಮಗಳೂ ಆಶ್ರಮದಲ್ಲೇ ನಡೆಯುತ್ತವೆ. ಗೋಣಿಕೊಪ್ಪಲು ಕೂರ್ಗ್ ಪಬ್ಲಿಕ್ ಸ್ಕೂಲಿನಲ್ಲಿ ಭಕ್ತರಿಗೆ ಅನುಕೂಲವಾಗುವಂತೆ ವಸತಿ ವ್ಯವಸ್ಥೆ ಮಾಡಲಾಗಿದೆ. 14.10.2024 ರಂದು ಬೆಳಿಗ್ಗೆ 10.30ಕ್ಕೆ ಬೆಂಗಳೂರಿನಿಂದ ಪೊನ್ನಂಪೇಟೆಗೆ ಬಸ್ ವ್ಯವಸ್ಥೆ ಮಾಡಲಾಗಿದೆ. ಬಸ್ ಬುಕಿಂಗ್ ಗಾಗಿ 98450 05273 ಫೋನ್ ಸಂಖ್ಯೆ ಸಂಪರ್ಕಿಸಿ.**

ಭಕ್ತಾದಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ದಿವ್ಯತ್ರಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ.

RTGS/ NEFT / UPI/ IMPS ಗಾಗಿ ಬ್ಯಾಂಕ್ ವಿವರಗಳು:
Sri Ramakrishna Sharadashrama, Ponnampet.
Union Bank of India, SB A/c.no.**520101041841472.**
IFSC Code : **UBIN0900320**
(ಪತ್ರ, ಇ–ಮೇಲ್ ಅಥವಾ ವಾಟ್ಸ್ಅಪ್ ಮೂಲಕ ವಿವರಗಳನ್ನು ತಿಳಿಸಿರಿ)

ಭಗವತ್ಸೇವೆಯಲ್ಲಿ ತಮ್ಮ,
**ಸ್ವಾಮಿ ಪರಹಿತಾನಂದ**
ಅಧ್ಯಕ್ಷರು